**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 1870/2023 ಸಿ.ಡಬ್ಲೂ.11 ಪಿ.ಡಬ್ಲೂ.9

| | |
|---|---|
| ಹೆಸರು | ಗಂಗಪ್ಪಾ |
| ತಂದೆ/ಗಂಡ | ಶೆರಶೆಪ್ಪಾ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಹಿರಿಯ ಮೋಟಾರ ವಾಹನ ನೀರಿಕ್ಷಕರು ಆರ್ ಟಿ ಓ ಕಲಬುರಗಿ |
| ವಾಸಸ್ಥಳ | ಕಲಬುರಗಿ |

ದಿನಾಂಕ 19-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಮಾರ್ಚ 2012 ರಿಂದ ಜೂನ್ 2023 ರವರೆಗೆ ಹಿರಿಯ ಮೋಟಾರ ವಾಹನ ನೀರಿಕ್ಷಕರು ಅಂತಾ ಕಲಬುರಗಿಯ ಆರ್ ಟಿ ಓ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 27-07-2022 ರಂದು ಬೆ. 10.30 ಗಂಟೆಗೆ ಸಿ.ಪಿ.ಐ ಆಳಂದದರಿಂದ ಅಪಘಾತಕ್ಕೆ ಈಡಾದ ವಾಹನಗಳ ಪರೀಕ್ಷೆ ಮಾಡಲು ಬಂದ ಮನವಿಯ ಮೇರೆಗೆ ಅದೇ ದಿನ ಸಾ. 4.30 ಗಂಟೆಗೆ ನರೋಣಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಆವರಣದಲ್ಲಿ ನಿಂತಿದ್ದ ಈ ಪ್ರಕರಣದಲ್ಲಿ ಭಾಗಿಯಾಗಿರುವ ವಾಹನ ಸಂಖ್ಯೆ ಕೆ ಎ-32/ಇಕ್ಯೂ- 7373, ಹಿರೋ ಸ್ಪಲ್ಲೆಂಡ ಪ್ಲಸ್ ಈ ವಾಹನವನ್ನು ಪರಿಕ್ಷೀಸಿದ್ದು ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತವೆ.

1. All indicators are broken
2. Foot gear liver pressed and damaged
3. Pillion rider left side foot rest and ladies foot rest damaged
4. Rear Tail lamp broken
5. Front brake liver broken
6. Both side logo covers damaged
7. Rear seat bracket broken.

ಇನ್ನೊಂದು ವಾಹನ ಸಂಖ್ಯೆ ಕೆ ಎ 25/ಇಸಿ-6695 ಹಿರೋ ಹೊಂಡಾ ಫ್ಯಾಶನ್ ಪ್ಲಸ್ ಈ ವಾಹನವನ್ನು ಪರಿಕ್ಷೀಸಿದ್ದು, ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತದೆ.

1. All indicators are broken
2. Front Headlight  assemble broken.
3. Meter box broken
4. Front wheel Mud Gard broken
5. Front wheel break liver broken
6. Right side leg guard damaged
7. Tool Box cover damaged.
8. Front wheel fork damaged ಸದರಿ ಎರಡು ವಾಹನಗಳನ್ನು ನಿಂತ ಸ್ಥಿತಿಯಲ್ಲಿ ಪರೀಕ್ಷೆ ಮಾಡಿ ನೋಡಲಾಗಿ ಎರಡು ವಾಹನಗಳ ಬ್ರೇಕ ವ್ಯವಸ್ಥೆ ಸರಿಯಾಗಿಯೇ ಇತ್ತು. ನನ್ನ ಪ್ರಕಾರ ಈ ಎರಡು ವಾಹನಗಳ ಅಪಘಾತವು ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ನಾನು ನನ್ನ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು MVA ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 13, ಸಾಕ್ಷಿಯ ಸಹಿಯನ್ನು ನಿಪಿ. 13(ಎ) ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ. ಎಮ ವಿ ಇ  ವಕೀಲರಿಂದ:</u>

ನಿಪಿ. 13 ರಲ್ಲಿ ನನಗೆ ಬಂದ ಮನವಿ ಪತ್ರದ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದಕ್ಕೆ provision ಇಲ್ಲದ ಕಾರಣ ನಮೂದಿಸಿಲ್ಲ ಅಂತಾ ನುಡಿಯುತ್ತಾರೆ. ಯಾವ ಕಲಂ ಪ್ರಕಾರ ಸಂಖ್ಯೆಯನ್ನು ನಮೂದಿಸಬಾರದು ಎಂದರೆ ಸಾಕ್ಷಿಯು ಸರ್ಕಾರದ Format ನಲ್ಲಿ ಇರುವುದಿಲ್ಲ ಅಂತಾ ನುಡಿಯುತ್ತಾರೆ. ನನ್ನ ಕಚೇರಿಯಿಂದ ಪತ್ರದ ಸಂಖ್ಯೆಯನ್ನು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅಲ್ಲಿ ಮಾಡಲು ಅವಕಾಶ ಇದ್ದ ಕಾರಣ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ.  ಯಾವ ಕಲಂ ಪ್ರಕಾರ ಸಂಖ್ಯೆಯನ್ನು ನಮೂದು ಮಾಡಿದ್ದೀರಿ ಎಂದರೆಸಾಕ್ಷಿಯು ನಿಪಿ. 13 ರ ಕಾಲಂನಲ್ಲಿ ಸಂಖ್ಯೆಯನ್ನು ನಮೂದಿಸಿಲು ಅವಕಾಶ ಇದ್ದ ಕಾರಣ ನಮೂದು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ.  ನಿಪಿ. 13 ರಲ್ಲಿ ನಾನು ಎಷ್ಟು ಗಂಟೆಗಳ ಕಾಲ ವಾಹನ ತಪಾಸಣೆ ಮಾಡಿರುತ್ತೇನೆ ಅಂತಾ ನಮೂದು ಇಲ್ಲ ಎಂದರೆ ಸರಿ. ನಾನು ವಾಹನ ತಪಾಸಣೆ ಮಾಡುವ ಕಾಲಕ್ಕೆ ಭಾವಚಿತ್ರಗಳನ್ನು ತೆಗೆದುಕೊಂಡಿರುವುದಿಲ್ಲ.

ದಿಃ 27-07-2022 ರಂದು ಬೆ. 10.30 ಗಂಟೆಗೆ ಸಿ.ಪಿ.ಐ ಆಳಂದದರಿಂದ ಅಪಘಾತಕ್ಕೆ ಈಡಾದ ವಾಹನಗಳ ಪರೀಕ್ಷೆ ಮಾಡಲು ಬಂದ ಮನವಿಯ ಮೇರೆಗೆ ಅದೇ ದಿನ ಸಾ. 4.30 ಗಂಟೆಗೆ ನರೋಣಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಆವರಣದಲ್ಲಿ ನಿಂತಿದ್ದ ಈ  ಪ್ರಕರಣದಲ್ಲಿ ಭಾಗಿಯಾಗಿರುವ ವಾಹನ ಸಂಖ್ಯೆ ಕೆ ಎ-32/ಇಕ್ಯೂ- 7373, ಹಿರೋ ಸ್ಪಲ್ಲೆಂಡ ಪ್ಲಸ್ ಈ ವಾಹನವನ್ನು ಪರಿಕ್ಷಿಸಿದ್ದು ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  1. All indicators are broken, 2. Foot gear liver

pressed and damaged, 3. Pilion rider left side foot rest and ladies foot rest damaged, 4. Rear Tail lamp broken, 5. Front brake liver broken, 6. Both side logo covers damaged, 7. Rear seat bracket broken. ಇನ್ನೊಂದು ವಾಹನ ಸಂಖ್ಯೆ ಕೆ ಎ 25/ಇಸಿ-6695 ಹಿರೋ ಹೊಂಡಾ ಫ್ಯಾಶನ್ ಪ್ಲಸ್ ಈ ವಾಹನವನ್ನು ಪರಿಕ್ಷೀಸಿದ್ದು, ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1. All indicators are broken, 2. Front Headlight assemble broken, 3. Meter box broken, 4. Front wheel Mud Gard broken, 5. front wheel break liver broken, 6. Right side leg guard damaged, 7. Tool Box cover damaged. 8 Front wheel fork damaged,

ಸದರಿ ಎರಡು ವಾಹನಗಳನ್ನು ನಿಂತ ಸ್ಥಿತಿಯಲ್ಲಿ ಪರೀಕ್ಷೆ ಮಾಡಿ ನೋಡಲಾಗಿ ಎರಡು ವಾಹನಗಳ ಬ್ರೇಕ ವ್ಯವಸ್ಥೆ ಸರಿಯಾಗಿಯೇ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಈ ಎರಡು ವಾಹನಗಳ ಅಪಘಾತವು ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ನಾನು ನನ್ನ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರು: 3ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.</u>

<u>ಮರು ವಿಚಾರಣೆ ಇರುವುದಿಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ